ಸಂಬಂಧಿಸಿದ ಉಳಿದ ಕೆಲಸವನ್ನೂ ಮಾಡಬೇಕಲ್ಲ. ಶಾಲೆಗೆ ಹೋಗುವ ಮಕ್ಕಳ ಬೇಕು ಬೇಡಗಳನ್ನೂ ನೋಡಿಕೊಳ್ಳಬೇಕು.

ಇಷ್ಟೆಲ್ಲ ಉಸಿರು ಕಟ್ಟಿಕೊಂಡು ದುಡಿಯುವ ಸಮಯದಲ್ಲಿ ಆಕೆಗೆ ಅನ್ನಿಸುವುದಿತ್ತು 'ಅವರಾದರೂ ಸಹಾಯಕ್ಕೆ ಇದ್ದಿದ್ದರೆ...' ತನ್ನ ಕೆಲಸ ಹಗುರವಾಗಬೇಕೆಂದಲ್ಲ. ಕೆಲಸಗಳನ್ನು ಇನ್ನಷ್ಟು ವ್ಯವಸ್ಥಿತವಾಗಿ ಮಾಡಬಹುದಿತ್ತಲ್ಲ ಎಂದು. ದುಡಿಯುವುದು ಅವಳಿಗೆ ಅಭ್ಯಾಸವೇ ಆಗಿದೆ. ಕೆಲಸಕ್ಕೆ ಹೆದರಿದ್ದೇ ಇಲ್ಲ ಅವಳು. ಅದು ಅತ್ತೆಯ ತರಬೇತಿ. ಅದಕ್ಕಿಂತ ಹೆಚ್ಚಾಗಿ ತನ್ನಪ್ಪ ಅಮ್ಮ ಕಣ್ಣೀರು ಒರಸುತ್ತ ತನ್ನನ್ನು ಬೀಳ್ಕೊಂಡಾಗಲೇ ತೀರ್ಮಾನ ಮಾಡಿದ್ದಳು. ಬದುಕಿದರೂ ಸತ್ತರೂ ತನಗೆ ಇನ್ನು ಮುಂದೆ ಸೇರಿದ ಮನೆಯೇ ಗತಿಯೆಂದು. ಅದಕ್ಕೆ ಸರಿಯಾಗಿ ದೇವರಂತಹ ಮಾವ ಒಳ್ಳೆಯ ಅತ್ತೆ ಸಿಕ್ಕಿದ ಮೇಲಂತೂ ಅವಳ ತೀರ್ಮಾನ ಬಲವಾಗುತ್ತ ಹೋಗಿತ್ತಷ್ಟೆ.

★★★

ಈ ವರ್ಷದ ಮಳೆಗಾಲ ಬಹಳ ಕಷ್ಟದ್ದಾಗಿತ್ತು. ಪ್ರಾರಂಭದಲ್ಲೇ ಹೊಡೆಯಲಿಕ್ಕೆ ತೊಡಗಿದ್ದ ಮಳೆ ಪ್ರಳಯವನ್ನೇ ಉಂಟುಮಾಡುತ್ತದೆಯೇನೋ ಎನ್ನುವಂತೆ ಒಂದೇ ಸಮನೆ ಸುರಿದಿತ್ತು. ಆಚೆ ಬದಿಯಲ್ಲಿ ಸಮುದ್ರದ ಕೊರೆತದ ಜತೆಗೆ ಆ ಉಬ್ಬರದ ನೀರು ಹೊಳೆಗೆ ಬಂದು ಹೊಳೆಯ ಎರಡು ದಡಗಳನ್ನೂ ಸಾಕಷ್ಟು ಕಬಳಿಸಿತ್ತು. ಮೊದಲೇ ಜಾಗ್ರತೆ ಮಾಡಿಕೊಂಡವರು ಬಚಾವಾದರು. ಅನುಕೂಲವಿದ್ದ ಕೆಲವರು ನೋಡಿ ನೋಡಿ ಕಲ್ಲಿನ ಜತೆ ಸಿಮೆಂಟು ಸೇರಿಸಿ ಭದ್ರವಾಗಿ ದಂಡೆ ಕಟ್ಟಿ ನೆರೆಯಲ್ಲ ಭೂಕಂಪವೇ ಆದರೂ ತಮ್ಮ ಜಾಗ ಅಲುಗಾಡದ ಹಾಗೆ ಮಾಡಿಕೊಂಡಿದ್ದರು. ಜನ ಬಲವಿದ್ದವರು ಗಟ್ಟಿ ಕೆಸರಿನ ಹೆಂಟೆಯನ್ನು ಮೇಲಿಂದ ಮೇಲೆ ಸುರಿದು ದಂಡೆಯನ್ನು ಬಲಪಡಿಸಿಕೊಂಡಿದ್ದರು. ಜನಬಲ ಧನಬಲ ಎರಡೂ ಇಲ್ಲದ ವಾಗ್ದೇವಿಗೇ ಸಮಸ್ಯೆ. ಎರಡೆರಡು ಮಕ್ಕಳನ್ನು ಶಾಲೆಗೆ ಕಳುಹಿಸುವ ಖರ್ಚಿನಲ್ಲಿ ಬೇರೆ ಯಾವುದಕ್ಕೂ ಹಣ ಸಾಲುತ್ತಿರಲಿಲ್ಲ. ದಿನವಿಡೀ ತೋಟದಲ್ಲಿ ಸುತ್ತುತ್ತ ಸಂಜೆಯಾಗುತ್ತಲೇ ಹತಾಶಳಾಗಿ ಹೊಳೆಯ ಪಕ್ಕದಲ್ಲಿ ಕುಳಿತು ಬೀಳುತ್ತಿರುವ ಮರಗಳನ್ನು ಒಂದೊಂದಾಗಿ ನೋಡುತ್ತಾ ಕಣ್ಣೊರಸಿಕೊಳ್ಳುತ್ತಿದ್ದಳು. ಹೀಗೆ ಮಳೆಗಾಲ ಕಳೆಯುವುದರೊಳಗೆ ಹತ್ತೈವತ್ತು ಮರಗಳಾದರೂ ಉರುಳಬಹುದೇನೋ. ಹಾಗೆ ಉರುಳುತ್ತ ಹೋದರೆ ಮುಂದೆ ಗತಿಯೇನು. ಮಕ್ಕಳು ಕೈಗೆ ಬರಬೇಕಾದರೆ ಇನ್ನೂ ವರ್ಷಗಳೇ ಬೇಕು. ಅಲ್ಲಿಯ ವರೆಗೆ ದಿನ ಕಳೆಯಬೇಕಲ್ಲ ಎನ್ನುವ ಚಿಂತೆಯೇ ಅವಳನ್ನು ಹರಿದು ಮುಕ್ಕುತ್ತಿತ್ತು.

ಹಾಗೆ ನೋಡ ನೋಡುತ್ತಿದ್ದಂತೆಯೇ ಮೊದಲ ಹದಿನೈದು ದಿನಗಳಲ್ಲಿಯೇ ಸುಮಾರು ಮೂವತ್ತು ನಲವತ್ತು ತೆಂಗಿನ ಮರಗಳು ಉರುಳಿದ್ದುವು. ಅಂದರೆ ಮುಂದಿನ ದಿನಗಳಲ್ಲಿ ಇದ್ದ ಬದ್ದ ಆದಾಯದಲ್ಲೂ ಮೂರನೇ ಒಂದು ಭಾಗ ಖೋತಾ. ಮಕ್ಕಳ ಖರ್ಚು ಹೆಚ್ಚುತ್ತಿತ್ತು. ಬೆಳೆಯುವ ಮಕ್ಕಳಿಗೆ ಬೆಳಿಗ್ಗೆಯೆದ್ದು ಕ್ಯಾರಿಯರಿನಲ್ಲಿ ತುಂಬಿಸಿಕೊಂಡು ಹೋಗುತ್ತಿದ್ದ ಊಟ ತಿನ್ನಲಿಕ್ಕೆ ಆಗುತ್ತಿರಲಿಲ್ಲ. ತಿಂದರೂ ಸಾಕಾಗುತ್ತಿರಲಿಲ್ಲ. ಜೊತೆಯವರು ಖರ್ಚು ಮಾಡುತ್ತಿದ್ದುದನ್ನು ನೋಡಿ ಜೊಲ್ಲು ಸುರಿಸುತ್ತಿದ್ದರೇ ವಿನಹ ತಾಯಿ ಪಡುತ್ತಿದ್ದ ಕಷ್ಟವನ್ನು ನೋಡಿದ್ದ ಅವು ಆಕೆಯ ಹತ್ತಿರ ಹಣ ಕೇಳಲಾರವು. ಆದರೆ ಸಾಯಂಕಾಲ ಮನೆಗೆ ಬಂದವರು ಅಮ್ಮ ಕೊಟ್ಟ ಅವಳೇ ಪುರುಸೊತ್ತಿದ್ದಾಗ ಮಾಡಿಟ್ಟಿದ್ದ ಕುರುಕಲು ತಿಂಡಿಯನ್ನೋ ಇಲ್ಲ ಕೆಂಡದಲ್ಲಿ ಸುಟ್ಟ ಒಣ ಹಪ್ಪಳವನ್ನೋ ತಿನ್ನುತ್ತ ಆಕೆಯೊಡನೆ ಹೇಳುವುದಿತ್ತು.'ಇವತ್ತು ಹೆಬ್ಬಾರರ ಮನೆ ವೆಂಕಟೇಶ ಅಷ್ಟು ಖರ್ಚು ಮಾಡಿದ. ಮೇಲಿನ ಮನೆ ಸುಬ್ಬಣ್ಣನ ಜೇಬಿನಲ್ಲಿ ಇಷ್ಟು ದುಡ್ಡಿತ್ತು. ನಾನೇ ಕಣ್ಣಾರೆ ಕಂಡೆ' ಎಂದು ಕಣ್ಣಲ್ಲಿ ಆಸೆ ತುಂಬಿಸಿ ಹೇಳುವಾಗ ಈಕೆಯ ಕಣ್ಣು ಹನಿಗೂಡುತ್ತಿತ್ತು. ಆ ಮನೆಯವರೆಲ್ಲ